# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC 1223/2024** **PW- 1**

ದಿಃ **21.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಮ್ ಜಿ ಎ ವಕೀಲರಿಂದಃ**

ನಾನು ಬಿ ಎ ಪದವೀಧರ. ದೂರುದಾರ ಸೊಸೈಟಿಗೆ ಸೇರಿ 14 ವರ್ಷ ಆಗಿದೆ. ಈ ಸಾಲ ಬಟವಡೆ ಆಗುವಾಗ ನಾನು ಇದ್ದೆ. ಇದು ವೈಯಕ್ತಿಕ ಸಾಲ. ಸಾಲ ಕೊಡುವಾಗ ಇಬ್ಬರು ಜಾಮೀನುದಾರರು ಪಡೆದುಕೊಂಡಿದ್ದೆವು. ಸಾಲ ಕೊಡದೇ ಇದ್ದಾಗ ಆರೋಪಿ ಕಡೆಯಿಂದ ಜಾಮೀನು ಸಲುವಾಗಿ ಚೆಕ್ ಪಡೆದೆವು. ಆರೋಪಿ ಚೆಕ್ಕನ್ನು ಬರೆದುಕೊಟ್ಟರು. ಸಾಲದ ಬಗ್ಗೆ ದಾಖಲಾತಿ ಆಗಿದೆ. ಸಾಲದ ಕರಾರು ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಪ್ರತಿ ತಿಂಗಳು ಆರೋಪಿ ರೂ 12 ಸಾವಿರದ ಚಿಲ್ಲರೆ ಹಣವನ್ನು ಕಟ್ಟಬೇಕಾಗಿತ್ತು. ಇದು 18 ತಿಂಗಳ ಅವಧಿಯ ಸಾಲ. ಇವತ್ತಿನವರೆಗೂ ಆರೋಪಿ ಸಾಲ ಕಟ್ಟಿಲ್ಲ. ಒಂದು ಕಂತನ್ನೂ ಸಹ ಕಟ್ಟಿಲ್ಲ. ಅವರ ಹಣ ಅವರ ಉಳಿತಾಯ ಖಾತೆಯಲ್ಲಿ ಇದೆ. ಈ ಬಗ್ಗೆ ನಮ್ಮ ಸೊಸೈಟಿಯಲ್ಲಿ ಸ್ಟೇಟಮೆಂಟ ಆಪ್ ಅಕೌಂಟ ಇದೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ. ಚೆಕನಲ್ಲಿ ನಮೂದಿಸಿದ ದಿನಾಂಕಕ್ಕೆ outstanding ಸಾಲ ಎಷ್ಟು ಇತ್ತು ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ರೂ 1,15,000/- ಸಾಲ ಇದ್ದು ನಿಖರವಾಗಿ ಹೇಳಲು ಆಗುವುದಿಲ್ಲ. ಆರೋಪಿ ಕೊಡಬೇಕಾದ ಎಲ್ಲ ಸಾಲದ ಹಣವನ್ನು ಪಾವತಿಸಿದ್ದರೂ ಸಹ ಅವರು ನೀಡಿದ ಖಾಲಿ ಚಕ್ಕನ್ನು ದುರುಪಯೋಗ ಮಾಡಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸೊಸೈಟಿಯಲ್ಲಿರುವ ಆರೋಪಿಯ outstanding loan amount ಮೊತ್ತಕ್ಕೂ ಮತ್ತು ಚೆಕನಲ್ಲಿ ತೊರಿದ ಮೊತ್ತಕ್ಕೂ ವ್ಯತ್ಯಾಸ ಇರುವುದರಿಂದ ನಾವು ಸಾಲದ ಖಾತೆಯ ಸ್ಟೇಟಮೆಂಟ ಹಾಗೂ ಸಾಲದ ಕರಾರು ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವದೇ ರೀತಿಯ ಹಣ

ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.